# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **785** |
| ಸದಸ್ಯರ ಹೆಸರು | ಶ್ರೀ ಮಧು. ಜಿ. ಮಾದೇಗೌಡ |
| ಉತ್ತರಿಸುವ ದಿನಾಂಕ | 21-02-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಯಾತ್ರಾ ಕೇಂದ್ರಗಳಲ್ಲಿ ಸ್ವಚ್ಛತೆಯನ್ನು ಖಚಿತಪಡಿಸಿಕೊಳ್ಳಲು "ಸ್ವಚ್ಛ ಮಂದಿರ ಅಭಿಯಾನ"ವನ್ನು ಎಷ್ಟು ಸ್ಥಳಗಳಲ್ಲಿ ಆರಂಭಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 83 ಮುಅಬಿ 2015, ದಿನಾಂಕ:29.08.2015ರ ಸುತ್ತೋಲೆಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ರಾಜ್ಯದ ಸಮೂಹ 'ಎ', 'ಬಿ' ಮತ್ತು 'ಸಿ' ಪ್ರವರ್ಗದ ದೇವಾಲಯಗಳಲ್ಲಿ "ಸ್ವಚ್ಛ ಮಂದಿರ ಅಭಿಯಾನ" ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿರುತ್ತದೆ. ಅದರಂತೆ ಎಲ್ಲಾ ಅಧಿಸೂಚಿತ ದೇವಾಲಯಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ಮುಂದುವರೆದು, ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ರಾಜ್ಯದ ಸಮೂಹ 'ಎ' ಪ್ರವರ್ಗದ ಒಟ್ಟು 205 ದೇವಾಲಯಗಳ ಪೈಕಿ ಹೆಚ್ಚಿನ ಭಕ್ತಾಧಿಗಳು ಭೇಟಿ ನೀಡುವ 25 ಪ್ರಮುಖ ದೇವಾಲಯಗಳಲ್ಲಿ ಸಂಗ್ರಹವಾಗುವ ಘನ ಮತ್ತು ದ್ರವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿಗೊಳಿಸಲು ಘನ ತ್ಯಾಜ್ಯ ಘಟಕಗಳನ್ನು ಸ್ಥಾಪಿಸುವ ಉದ್ದೇಶದಿಂದ ನಿಯಮಾನುಸಾರ ಟೆಂಡರ್ ಪ್ರಕ್ರಿಯೆಯನ್ನು ನಡೆಸಿ, ಯಶಸ್ವಿ ಟೆಂಡರ್‌ದಾರರಾದ M/s Grant Thornton Bhararat LLP, Bangalore ರವರಿಗೆ ಉದ್ದೇಶಿತ "ಸ್ವಚ್ಛ ಮಂದಿರ ಅಭಿಯಾನ" ಯೋಜನೆಯನ್ನು ಸದರಿ ದೇವಾಲಯಗಳಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಿ, ಅದನ್ನು ನಿರ್ವಹಿಸಲು ಅಗತ್ಯವಾದ ಕಾರ್ಯ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಿ ಅನುಷ್ಠಾನಕ್ಕೆ ತರಲು 2 ವರ್ಷಗಳ ಅವಧಿಗೆ ದಿನಾಂಕ:22.04.2021ರಂದು ಕಾರ್ಯಾದೇಶವನ್ನು ನೀಡುವ ಮೂಲಕ ಸದರಿ ಸಂಸ್ಥೆಯವರಿಂದ ತಜ್ಞ ಅಭಿಯಂತರರನ್ನು ಒಳಗೊಂಡ Project management unitನ ಸೇವೆಯನ್ನು ನಿಯೋಜಿಸಿಕೊಳ್ಳಲಾಗಿತ್ತು.<br><br>ಸದರಿ ಸಂಸ್ಥೆಯ ವತಿಯಿಂದ ನಿಯೋಜಿಸಿಕೊಳ್ಳಲಾದ PMU ಅಭಿಯಂತರರು "ಸ್ವಚ್ಛ ಮಂದಿರ ಅಭಿಯಾನ" ಯೋಜನೆಯನ್ನು ಅನುಷ್ಠಾನಗೊಳಿಸಲು ಆಯ್ಕೆ ಮಾಡಲಾದ 25 ದೇವಾಲಯಗಳಿಗೆ ಭೇಟಿ ನೀಡಿ ಈ ದೇವಾಲಯಗಳಿಗೆ ಸಂಬಂಧಿಸಿದಂತೆ, ಹಂತ ಹಂತವಾಗಿ ನೀಡಲಾದ ಅಂತಿಮ DPR (Detailed Project Report) ವರದಿಯಂತೆ, ಸದರಿ ದೇವಾಲಯಗಳಲ್ಲಿ ಘನ ತ್ಯಾಜ್ಯ ಘಟಕಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ಆದರೆ ಕೆಲವು ಪ್ರಮುಖ ಪ್ರವರ್ಗ 'ಎ' ದೇವಾಲಯಗಳು ಭಾರತೀಯ ಪುರಾತತ್ವ ಇಲಾಖೆಯ ವ್ಯಾಪ್ತಿಯಲ್ಲಿ ಇರುವುದರಿಂದ ಹಾಗೂ ಕೆಲವು ದೇವಾಲಯಗಳಲ್ಲಿ ಘನ ತ್ಯಾಜ್ಯ ಘಟಕ ನಿರ್ಮಿಸಲು ಸ್ಥಳಾವಕಾಶದ ಅಭಾವ ಕಂಡು ಬಂದ ಕಾರಣ ಪ್ರಸ್ತುತ ಒಟ್ಟು 18 ದೇವಸ್ಥಾನಗಳಲ್ಲಿ "ಸ್ವಚ್ಛ ಮಂದಿರ ಅಭಿಯಾನ" ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿತ ಘನ ತ್ಯಾಜ್ಯ ಘಟಕಗಳನ್ನು ಸ್ಥಾಪನೆ ಮಾಡಿ |

| ಪ್ರಶ್ನೆ | | ಉತ್ತರ |
|---|---|---|
| | | ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.<br>18 ದೇವಾಲಯಗಳ ಪಟ್ಟಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಆ) | "ಸ್ವಚ್ಛ ಮಂದಿರ ಅಭಿಯಾನ" ವನ್ನು ಇನ್ನಷ್ಟು ಯಾತ್ರಾ ಸ್ಥಳಗಳಿಗೆ ವಿಸ್ತರಿಸಲು ಸರ್ಕಾರ ಚಿಂತನೆ ನಡೆಸಿದೆಯೇ; ಇದ್ದಲ್ಲಿ, (ಸಂಪೂರ್ಣ ಮಾಹಿತಿ ನೀಡುವುದು) | ಈಗಾಗಲೇ ಘನ ತ್ಯಾಜ್ಯ ಘಟಕ ನಿರ್ಮಾಣ ಮಾಡಲಾಗಿರುವ ಪ್ರಮುಖ 18 ದೇವಾಲಯಗಳಲ್ಲಿ ಸಂಗ್ರಹವಾಗುತ್ತಿರುವ ತ್ಯಾಜ್ಯ ನಿರ್ವಹಣೆ ಮತ್ತು ಅದರ ವಿಲೇವಾರಿಯ ಕಾರ್ಯದ ಪ್ರಗತಿ ಆಧರಿಸಿ ಪರಿಶೀಲಿಸಿಕೊಂಡು ಅನುಷ್ಠಾನಗೊಳಿಸಲಾದ ಉದ್ದೇಶಿತ ಯೋಜನೆಯು ನಿರೀಕ್ಷಿತ ಮಟ್ಟದಲ್ಲಿ ಫಲಪ್ರದವಾಗಿರುವುದನ್ನು ಗಮನಿಸಿಕೊಂಡು "ಸ್ವಚ್ಛ ಮಂದಿರ ಅಭಿಯಾನ"ವನ್ನು ಇನ್ನಷ್ಟು ಯಾತ್ರಾ ಸ್ಥಳಗಳಿಗೆ ವಿಸ್ತರಿಸಲು ಪರಿಶೀಲಿಸಲಾಗುತ್ತಿದೆ. |
| ಇ) | ಈಗಾಗಲೇ ಸ್ವಚ್ಛ ಮಂದಿರ ಅಭಿಯಾನ" ಪ್ರಾರಂಭಿಸಿರುವ ದೇವಸ್ಥಾನಗಳ ಆವರಣದಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ನಿರ್ಮಾಣ ಮಾಡಿದ್ದರೆ ಅದರ ವಿವರ ಮತ್ತು ಇದಕ್ಕೆ ತಗುಲಿದ ವೆಚ್ಚದ ವಿವರ ನೀಡುವುದು; | ಪ್ರಸ್ತುತ ಒಟ್ಟು 18 ದೇವಸ್ಥಾನಗಳಲ್ಲಿ "ಸ್ವಚ್ಛ ಮಂದಿರ ಅಭಿಯಾನ" ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿತ ಘನ ತ್ಯಾಜ್ಯ ಘಟಕಗಳನ್ನು ಸ್ಥಾಪಿಸಿ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.<br><br>ಈಗಾಗಲೇ ಒಟ್ಟು 18 ದೇವಸ್ಥಾನಗಳ ಆವರಣದಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ನಿರ್ಮಾಣ ಮಾಡಲಾಗಿದ್ದು, ಇದಕ್ಕೆ ತಗುಲಿದ ದೇವಾಲಯವಾರು ವೆಚ್ಚದ ವಿವರನ್ನು **ಅನುಬಂಧ- 2ರಲ್ಲಿ** ಒದಗಿಸಿದೆ. |
| ಈ) | ಈ ದೇವಾಲಯಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಸಂಗ್ರಹಣೆ ಸಾಗಾಣೆ ಸಂಸ್ಕರಣೆ ವಿಲೇವಾರಿಗೆ ಯಾವ ರೀತಿಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ: | ಸದರಿ ದೇವಾಲಯಗಳಲ್ಲಿ ಸಂಗ್ರಹವಾಗುವ ತ್ಯಾಜ್ಯಗಳನ್ನು ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯಗಳಾಗಿ ವಿಂಗಡಿಸಿ ಹಸಿ ತ್ಯಾಜ್ಯದಿಂದ ಗೊಬ್ಬರ ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಒಣ ತ್ಯಾಜ್ಯಗಳನ್ನು ಸ್ಥಳೀಯ ಆಡಳಿತ (ಪಂಚಾಯಿತಿ/ ನಗರಸಭೆ/ ಪುರಸಭೆ/ ನಗರ ಪಾಲಿಕೆ) ಗಳಿಗೆ ನೀಡುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಹಾಗೂ ನಿಯಮಾನುಸಾರ ಮಾರಾಟ ಮಾಡಲಾಗುತ್ತಿದೆ. |
| ಉ) | ಈ ದೇವಾಲಯಗಳಲ್ಲಿ ಉತ್ಪತ್ತಿಯಾದ ತ್ಯಾಜ್ಯ ಪ್ರಮಾಣ ಎಷ್ಟು: ವಾಸ್ತವವಾಗಿ, ಈ ದೇವಸ್ಥಾನಗಳು ಸುಸ್ಥಿತಿ ಸಂಸ್ಥೆ ಮತ್ತು ಶೂನ್ಯ ತ್ಯಾಜ್ಯ ಆವರಣವಾಗಿ ಬದಲಾವಣೆ ಕಂಡಿದೆಯೇ? (ಸಂಪೂರ್ಣ ವಿವರ ನೀಡುವುದು) | ಈ ದೇವಾಲಯಗಳಲ್ಲಿ ದಿನನಿತ್ಯ ಸಂಗ್ರಹವಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿಗೊಳಿಸಲು ಘನ ತ್ಯಾಜ್ಯ ಘಟಕಗಳಿಗೆ ಪ್ರತಿನಿತ್ಯ ಒದಗಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿರುವುದರಿಂದ ಬಹುತೇಕ ದೇವಾಲಯಗಳ ಆವರಣವು ಶೂನ್ಯ ತ್ಯಾಜ್ಯ ಆವರಣವಾಗಿ ಬದಲಾವಣೆಯಾಗುತ್ತಿರುವುದು ಕಂಡು ಬರುತ್ತಿದ್ದು, ದೇವಾಲಯಗಳನ್ನು ಶೂನ್ಯ ತ್ಯಾಜ್ಯ ಆವರಣವಾಗಿ ಬದಲಾಯಿಸುವ ನಿಟ್ಟಿನಲ್ಲಿ ಅವಶ್ಯಕ ಸಿಬ್ಬಂದಿಗಳನ್ನು ಹಾಗೂ ನಾಲ್ಕೈದು ದೇವಾಲಯಗಳಿಗೆ ಒಬ್ಬರಂತೆ ಒಬ್ಬ Environment Engineer ರನ್ನು ನಿಯೋಜಿಸಿಕೊಳ್ಳಲು ಸಹ ಪರಿಶೀಲಿಸಲಾಗುತ್ತಿದ್ದು, ಅಗತ್ಯವಿರುವ ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.<br><br>ಈ ದೇವಾಲಯಗಳಲ್ಲಿ ಸಂಗ್ರಹವಾಗುವ ತ್ಯಾಜ್ಯ ಪ್ರಮಾಣದ ವಿವರವನ್ನು **ಅನುಬಂಧ-3ರಲ್ಲಿ** ಒದಗಿಸಿದೆ. |

ಸಂಖ್ಯೆ: ಕಂಇ 34 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 785 ಅನುಬಂಧ- 1

| ಕ್ರ.ಸಂ. | ಘನ ತ್ಯಾಜ್ಯ ಘಟಕ ನಿರ್ಮಾಣ ಮಾಡಲಾಗಿರುವ ದೇವಾಲಯಗಳ ಹೆಸರು | ಘನ ತ್ಯಾಜ್ಯ ಘಟಕ ನಿರ್ಮಾಣ ಮತ್ತು ಯಂತ್ರೋಪಕರಣ ಹಾಗೂ ಅಗತ್ಯ ಪರಿಕರಗಳ ಖರೀದಿಗೆ ತಗುಲಿದ ಒಟ್ಟು ವೆಚ್ಚದ ವಿವರ (ರೂ. ಗಳಲ್ಲಿ) |
|---|---|---|
| 1 | ಶ್ರೀ ಬನಶಂಕರಿ ದೇವಾಲಯ. ಎಸ್ ಕರಿಯಪ್ಪ, ರಸ್ತೆ. ಬೆಂಗಳೂರು ನಗರ | 45,19,000/- |
| 2 | ಶ್ರೀ ಕೆಂಗಲ್ ಆಂಜನೇಯ ದೇವಾಲಯ ರಾಮನಗರ. | 9,68,308/- |
| 3 | ಶ್ರೀ ರೇವಣ್ಣ ಸಿದ್ದೇಶ್ವರ ಸ್ವಾಮಿ ದೇವಾಲಯ ರಾಮನಗರ. | 94,000/- |
| 4 | ಶ್ರೀ ಕಬ್ಬಾಳಮ್ಮ ದೇವಾಲಯ ರಾಮನಗರ. | 97,803/- |
| 5 | ಶ್ರೀ ರಂಗನಾಥಸ್ವಾಮಿ ದೇವಸ್ಥಾನ, ಶ್ರೀ ರಂಗಪಟ್ಟಣ | 67,00000/-- |
| 6 | ಶ್ರೀ ನಿಮಿಷಾಂಬ ದೇವಾಲಯ ಗಂಜಾಂ. | |
| 7 | ಶ್ರೀ ಚಾಮುಂಡೇಶ್ವರಿ ದೇವಾಲಯ ಮೈಸೂರು. | 76,65,000/- |
| 8 | ಶ್ರೀ ಲಕ್ಷ್ಮೀನರಸಿಂಹ ದೇವಾಲಯ ದೇವರಾಯನದುರ್ಗ. ತುಮಕೂರು | 79,90,381/- |
| 9 | ಶ್ರೀ ಸಿದ್ದಲಿಂಗೇಶ್ವರ ದೇವಾಲಯ ಎಡೆಯೂರು. ತುಮಕೂರು | 1,6,00000/- |
| 10 | ಶ್ರೀ ಗುರುತಿಪ್ಪೇರುದ್ರಸ್ವಾಮಿ ದೇವಾಲಯ ನಾಯಕನಹಟ್ಟಿ. ಚಿತ್ರದುರ್ಗ | 65,00000/- |
| 11 | ಶ್ರೀ ಕನಕದುರ್ಗಮ್ಮ ದೇವಾಲಯ ಬಳ್ಳಾರಿ. | 33,10,000/- |
| 12 | ಶ್ರೀ ಮೈಲಾರಲಿಂಗೇಶ್ವರ ದೇವಾಲಯ ಮೈಲಾರ. ವಿಜಯನಗರ. | 33,16,000/- |
| 13 | ಶ್ರೀ ಹುಲಿಗೆಮ್ಮ ದೇವಾಲಯ ಹುಲಗಿ. ಕೊಪ್ಪಳ. | 96,14,000/- |
| 14 | ಶ್ರೀ ರೇಣುಕಾಯಲ್ಲಮ್ಮ ದೇವಾಲಯ ಸವದತ್ತಿ. ಬೆಳಗಾವಿ | 1,28,92,000 |
| 15 | ಶ್ರೀ ಅಶ್ವತ್ಥನಾರಾಯಣ ದೇವಾಲಯ ವಿದುರಾಶ್ವಥ , ಕೋಲಾರ | 56,84,782/- |
| 16 | ಶ್ರೀ ರಾಜರಾಜೇಶ್ವರಿ ದೇವಾಲಯ ಪೊಳಲಿ. ದಕ್ಷಿಣ ಕನ್ನಡ . | 5,00000/- |
| 17 | ಶ್ರೀ ದುರ್ಗಾಪರಮೇಶ್ವರಿ ದೇವಾಲಯ ಮಂದಾರ್ತಿ. ದಕ್ಷಿಣ ಕನ್ನಡ . | 3,94,000/- |
| 18 | ಶ್ರೀ ಮಹಾಲಿಂಗೇಶ್ವರ ದೇವಾಲಯ ಪುತ್ತೂರು. ದಕ್ಷಿಣ ಕನ್ನಡ ಜಿಲ್ಲೆ. | 26,11,000/- |

K. Pushpa...

ಆಯುಕ್ತರ ಪರವಾಗಿ,
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 785

ಅನುಬಂಧ-2

| ಕ್ರ.ಸಂ. | ಘನ ತ್ಯಾಜ್ಯ ಘಟಕ ನಿರ್ಮಾಣ ಮಾಡಲಾಗಿರುವ ದೇವಾಲಯಗಳ ಹೆಸರು | ಪ್ರತಿನಿತ್ಯ ಉತ್ಪತ್ತಿಯಾಗುವ ಅಂದಾಜು ತ್ಯಾಜ್ಯಗಳ ಪ್ರಮಾಣ |
|---|---|---|
| 1 | ಶ್ರೀ ಬನಶಂಕರಿ ದೇವಾಲಯ. ಎಸ್ ಕರಿಯಪ್ಪ, ರಸ್ತೆ. ಬೆಂಗಳೂರು ನಗರ | 7000 ದಿಂದ 8000 ಕೆ.ಜಿ. |
| 2 | ಶ್ರೀ ಕೆಂಗಲ್ ಆಂಜನೇಯ ದೇವಾಲಯ ರಾಮನಗರ. | 3000 ದಿಂದ 4000 ಕೆ.ಜಿ. |
| 3 | ಶ್ರೀ ರೇವಣ್ಣ ಸಿದ್ದೇಶ್ವರ ಸ್ವಾಮಿ ದೇವಾಲಯ ರಾಮನಗರ. | 2000 ದಿಂದ 2500 ಕೆ.ಜಿ. |
| 4 | ಶ್ರೀ ಕಬ್ಬಾಳಮ್ಮ ದೇವಾಲಯ ರಾಮನಗರ. | 5800 ದಿಂದ 6000 ಕೆ.ಜಿ. |
| 5 | ಶ್ರೀ ರಂಗನಾಥಸ್ವಾಮಿ ದೇವಸ್ಥಾನ, ಶ್ರೀ ರಂಗಪಟ್ಟಣ | 4000 ದಿಂದ 5000 ಕೆ.ಜಿ. |
| 6 | ಶ್ರೀ ನಿಮಿಷಾಂಬ ದೇವಾಲಯ ಗಂಜಾಂ. | |
| 7 | ಶ್ರೀ ಚಾಮುಂಡೇಶ್ವರಿ ದೇವಾಲಯ ಮೈಸೂರು. | 1000 ದಿಂದ 2000 ಕೆ.ಜಿ. |
| 8 | ಶ್ರೀ ಲಕ್ಷ್ಮೀನರಸಿಂಹ ದೇವಾಲಯ ದೇವರಾಯನದುರ್ಗ. ತುಮಕೂರು | 2000 ದಿಂದ 2500 ಕೆ.ಜಿ. |
| 9 | ಶ್ರೀ ಸಿದ್ದಲಿಂಗೇಶ್ವರ ದೇವಾಲಯ ಎಡೆಯೂರು. ತುಮಕೂರು | 3000 ದಿಂದ 4000 ಕೆ.ಜಿ. |
| 10 | ಶ್ರೀ ಗುರುತಿಪ್ಪೇರುದ್ರಸ್ವಾಮಿ ದೇವಾಲಯ ನಾಯಕನಹಟ್ಟಿ. ಚಿತ್ರದುರ್ಗ | 5800 ದಿಂದ 6000 ಕೆ.ಜಿ. |
| 11 | ಶ್ರೀ ಕನಕದುರ್ಗಮ್ಮ ದೇವಾಲಯ ಬಳ್ಳಾರಿ. | 1000 ದಿಂದ 1500 ಕೆ.ಜಿ. |
| 12 | ಶ್ರೀ ಮೈಲಾರಲಿಂಗೇಶ್ವರ ದೇವಾಲಯ ಮೈಲಾರ. ವಿಜಯನಗರ. | 2000 ದಿಂದ 2500 ಕೆ.ಜಿ. |
| 13 | ಶ್ರೀ ಹುಲಿಗೆಮ್ಮ ದೇವಾಲಯ ಹುಲಗಿ. ಕೊಪ್ಪಳ. | 1000 ದಿಂದ 2000 ಕೆ.ಜಿ. |
| 14 | ಶ್ರೀ ರೇಣುಕಾಯಲ್ಲಮ್ಮ ದೇವಾಲಯ ಸವದತ್ತಿ. ಬೆಳಗಾವಿ. | 6000 ದಿಂದ 7000 ಕೆ.ಜಿ. |
| 15 | ಶ್ರೀ ಅಶ್ವತ್ಥನಾರಾಯಣ ದೇವಾಲಯ ವಿದುರಾಶ್ವಥ , ಕೋಲಾರ | 1000 ದಿಂದ 1500 ಕೆ.ಜಿ. |
| 16 | ಶ್ರೀ ರಾಜರಾಜೇಶ್ವರಿ ದೇವಾಲಯ ಪೊಳಲಿ. ದಕ್ಷಿಣ ಕನ್ನಡ . | 1000 ದಿಂದ 1500 ಕೆ.ಜಿ. |
| 17 | ಶ್ರೀ ದುರ್ಗಾಪರಮೇಶ್ವರಿ ದೇವಾಲಯ ಮಂದಾರ್ತಿ. ದಕ್ಷಿಣ ಕನ್ನಡ | 1000 ದಿಂದ 1500 ಕೆ.ಜಿ. |
| 18 | ಶ್ರೀ ಮಹಾಲಿಂಗೇಶ್ವರ ದೇವಾಲಯ ಪುತ್ತೂರು. ದಕ್ಷಿಣ ಕನ್ನಡ ಜಿಲ್ಲೆ. | 1000 ದಿಂದ 1500 ಕೆ.ಜಿ. |

ಆಯುಕ್ತರ ಪರವಾಗಿ,
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.